ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

# ರಾಜಾನುಕುಂಟೆ ಮಲತ್ಯಾಜ್ಯ ನಿರ್ವಹಣಾ ಘಟಕ ರಾಜ್ಯಕ್ಕೆ ಮಾದರಿ

ಸ್ವಚ್ಛ ಭಾರತ ಕೇವಲ ಅಭಿಯಾನವಲ್ಲ. ಅದು ಪ್ರತಿಯೊಬ್ಬರ ಹೊಣೆಗಾರಿಕೆ ಮತ್ತು ಕರ್ತವ್ಯ. ಸ್ವಚ್ಛ ಪರಿಸರ ಕಾಪಾಡಲು ತ್ಯಾಜ್ಯದ ಸೂಕ್ತ ವಿಲೇವಾರಿ ಅತ್ಯವಶ್ಯಕ. ಘನ ತ್ಯಾಜ್ಯ, ಬೂದು ನೀರಿನ ವ್ಯವಸ್ಥಿತ ನಿರ್ವಹಣೆಯ ಜೊತೆಗೆ ಮಲ ತ್ಯಾಜ್ಯದ ನಿರ್ವಹಣೆಯೂ ಅತಿಮುಖ್ಯ. ಈ ನಿಟ್ಟಿನಲ್ಲಿ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯು ದಿಟ್ಟ ಹೆಜ್ಜೆಯನ್ನಿಟ್ಟಿದ್ದು, ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕಿನ ರಾಜಾನುಕುಂಟೆಯ ಮಲತ್ಯಾಜ್ಯ ನಿರ್ವಹಣಾ ಘಟಕ ಅದಕ್ಕೆ ಸಾಕ್ಷಿಯಾಗಿ ನಿಂತಿದೆ.








**ಮ್ಯಾನ್ಯುಯೆಲ್ ಸ್ಕ್ಯಾವೆಂಜಿಂಗ್ ಶಿಕ್ಷಾರ್ಹ ಅಪರಾಧ**

ಮಲತ್ಯಾಜ್ಯ ನಿರ್ವಹಣೆಗೆ ಈ ಮೊದಲು ಮನುಷ್ಯರನ್ನು ಶೌಚಗುಂಡಿಗೆ ಇಳಿಸಿ ಸ್ವಚ್ಛಗೊಳಿಸುವ ಪದ್ಧತಿಯಿತ್ತು. ಆದ್ರೆ ಮ್ಯಾನ್ಯುಯೆಲ್ ಸ್ಕ್ಯಾವೆಂಜಿಂಗ್ ಅಥವಾ ಮಲಹೊರುವ ಪದ್ಧತಿಯು ಅತ್ಯಂತ ಕ್ರೂರ ಮತ್ತು ಕಾನೂನು ಬಾಹಿರವಾಗಿದ್ದು, ಭಾರತದಲ್ಲಿ ಇದನ್ನು ನಿಷೇಧಿಸಲಾಗಿದೆ. **ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಅನ್ನು ಪ್ರೋತ್ಸಾಹಿಸಿದಲ್ಲಿ 2-7 ವರ್ಷ ಜೈಲು ಶಿಕ್ಷೆ ಅಥವಾ 2-5 ಲಕ್ಷ ದಂಡ ಅಥವಾ ಎರಡನ್ನು ಒಳಗೊಂಡಂತೆ ಶಿಕ್ಷೆ ವಿಧಿಸಲಾಗುತ್ತದೆ.** ಈ ಮಲಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಉದ್ದೇಶದಿಂದಲೇ ಪ್ರಾರಂಭಗೊಂಡ ಯೋಜನೆ ಮಲತ್ಯಾಜ್ಯ ನಿರ್ವಹಣಾ ಘಟಕ.

## ಮಲತ್ಯಾಜ್ಯದ ಸಮರ್ಪಕ ನಿರ್ವಹಣೆಗೆ ನೆರವಾದ ರಾಜಾನುಕುಂಟೆ FSM ಘಟಕ

ಬೆಂಗಳೂರು ನಗರ ಜಿ.ಪಂ ವ್ಯಾಪ್ತಿಯ ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬಗಳಿಗೆ ಪ್ರತ್ಯೇಕ ಶೌಚಾಲಯ ನಿರ್ಮಿಸಲಾಗಿತ್ತು. 2016ರಲ್ಲಿ ಬೆಂಗಳೂರು ನಗರ ಜಿಲ್ಲೆಯು ಬಯಲು ಮಲವಿಸರ್ಜನೆ ಮುಕ್ತ (ODF) ಎಂದು ಘೋಷಿಸಲ್ಪಟ್ಟಿತು. ಆದಾಗ್ಯೂ, ಸ್ಥಳಾವಕಾಶದ ಕೊರತೆಯಿಂದಾಗಿ, ಹೆಚ್ಚಿನ ಕಡೆ ಏಕ ಗುಂಡಿ ಶೌಚಾಲಯ ನಿರ್ಮಿಸಲಾಗಿತ್ತು. ಅವಳಿ ಗುಂಡಿ ಶೌಚಾಲಯ ಇದ್ದಲ್ಲಿ, ಒಂದು ಗುಂಡಿ ತುಂಬಿದ ನಂತರ ಅದರ ವಾಲ್ ಗೇಟ್ ಅನ್ನು ಇನ್ನೊಂದು ಗುಂಡಿಗೆ ತಿರುಗಿಸುವ ಮೂಲಕ ಅಲ್ಲಿಯೇ ಮಲತ್ಯಾಜ್ಯವನ್ನು ನಿರ್ವಹಿಸಬಹುದು. ಆದ್ರೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಏಕ ಗುಂಡಿ ಶೌಚಾಲಯಗಳೇ ಹೆಚ್ಚಿದ್ದರಿಂದ ಶೌಚ ಗುಂಡಿ ತುಂಬಿದಾಗ ಮಲ ತ್ಯಾಜ್ಯ ಹೊರತೆಗೆಯಲು ಹಾಗೂ ಸುರಕ್ಷಿತ ವಿಲೇವಾರಿಗೆ ಪರ್ಯಾಯ ವ್ಯವಸ್ಥೆಯಿರಲಿಲ್ಲ. ಹೀಗಾಗಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಮಲತ್ಯಾಜ್ಯದ ವ್ಯವಸ್ಥಿತ ನಿರ್ವಹಣೆಗಾಗಿ ಜುಲೈ 4, 2022ರಂದು ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕಿನ ರಾಜಾನುಕುಂಟೆ ಗ್ರಾ.ಪಂ ವ್ಯಾಪ್ತಿಯಲ್ಲಿ ಮಲತ್ಯಾಜ್ಯ ನಿರ್ವಹಣಾ ಘಟಕವನ್ನು ಉದ್ಘಾಟಿಸಲಾಯಿತು. **ಈ ಘಟಕವು ಒಟ್ಟು 4178 ಮನೆಗಳು ಮತ್ತು 17305 ಜನರಿಗೆ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸುತ್ತಿದೆ.**

ರಾಜಾನುಕುಂಟೆ ಗ್ರಾಮ ಪಂಚಾಯಿತಿಯು ಒಟ್ಟು 3063 ಹೆಕ್ಟರ್ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ಪಂಚಾಯಿತಿ ವ್ಯಾಪ್ತಿಗೆ 7 ಗ್ರಾಮಗಳು ಬರುತ್ತವೆ. ಅದರಂತೆ, ಸುತ್ತಮುತ್ತಲಿನ 6 ಗ್ರಾಮ ಪಂಚಾಯಿತಿ ವ್ಯಾಪ್ತಿಯ 62 ಗ್ರಾಮಗಳಿಗೆ ಅನುಕೂಲವಾಗುವಂತೆ SBMG ಯೋಜನೆಯಡಿ 44.40 ಲಕ್ಷ ರೂ. ವೆಚ್ಚದಲ್ಲಿ 12 KLW ಸಾಮರ್ಥ್ಯದ ಮಲ ತ್ಯಾಜ್ಯ ನಿರ್ವಹಣಾ ಘಟಕವನ್ನು ನಿರ್ಮಾಣ ಮಾಡಲಾಗಿದೆ.

ರಾಜಾನುಕುಂಟೆ ಮಲ ತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಪ್ರಸ್ತುತ 3000 ಲೀಟರ್ ಸಾಮರ್ಥ್ಯದ ಟ್ಯಾಂಕರ್‌ನ ಮೂಲಕ ಶಾಲೆ, ಸಮುದಾಯ ಭವನ, ಘನ ತ್ಯಾಜ್ಯ ಘಟಕ ಮತ್ತು ಅಂಗಡಿ, ಮನೆಗಳಿಂದ ಮಲತ್ಯಾಜ್ಯವನ್ನು ಸಂಗ್ರಹಿಸಿ, ಸಂಸ್ಕರಿಸಲಾಗುತ್ತದೆ. ಈವರೆಗೆ ಈ ಘಟಕದಲ್ಲಿ 437 ಲೋಡ್ ಮಲತ್ಯಾಜ್ಯವನ್ನು ಸಂಸ್ಕರಿಸಲಾಗಿದೆ. ಮೂವರು ಸಿಬ್ಬಂದಿ ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## FSM ಘಟಕ ನಿರ್ಮಾಣದಿಂದ ಗ್ರಾಮ ಪಂಚಾಯಿತಿಗೂ ಆದಾಯ

ಸಾರ್ವಜನಿಕರ ಅನುಕೂಲಕ್ಕಾಗಿಯೇ ಈ FSM ಘಟಕವನ್ನು ನಿರ್ಮಿಸಲಾಗಿದ್ದು, ಶೌಚಾಲಯದ ಗುಂಡಿ ತುಂಬಿದಲ್ಲಿ, ಗ್ರಾಮ ಪಂಚಾಯಿತಿಗೆ ತಿಳಿಸಿ ಮಲ ತ್ಯಾಜ್ಯದ ವಿಲೇವಾರಿ ಮಾಡಿಸಬಹುದಾಗಿದೆ. ಇದಕ್ಕಾಗಿ ಪ್ರತಿ ಲೋಡ್‌ಗೆ ರೂ.750/- ರಂತೆ ಗ್ರಾಮ ಪಂಚಾಯಿತಿ ದರ ನಿಗದಿ ಮಾಡಿದೆ. ಇದರಿಂದ ಘಟಕಕ್ಕೆ 3.27 ಲಕ್ಷ ಆದಾಯ ಬಂದಿದೆ. ಸಂಸ್ಕರಿಸ್ಪಟ್ಟ ತ್ಯಾಜ್ಯದ ರೊಚ್ಚು ಗೊಬ್ಬರವಾಗಿ ಪರಿವರ್ತನೆಯಾಗುತ್ತದೆ. ಈ ಸಾವಯವ ಗೊಬ್ಬರವನ್ನು ಕೃಷಿಗೆ ಬಳಸಲು ರೈತರನ್ನು ಪ್ರೇರೇಪಿಸಲಾಗಿದೆ. ಸಂಸ್ಕರಿಸಿದ ಕಪ್ಪು ನೀರನ್ನು ಪ್ರಯೋಗಾಲದಲ್ಲಿ ಪರೀಕ್ಷಿಸಿದ ನಂತರ ಘಟಕ ವ್ಯಾಪ್ತಿಯ ಸಸಿಗಳಿಗೆ ಬಳಸಲಾಗುತ್ತಿದೆ.

ಗ್ರಾ.ಪಂ ಮಟ್ಟದಲ್ಲಿ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಂಡು ಮಲ ತ್ಯಾಜ್ಯ ನಿರ್ವಹಣಾ ಘಟಕದ ನಿರ್ವಹಣೆ ಮತ್ತು ಜವಾಬ್ದಾರಿಯ ಬಗ್ಗೆ ಗ್ರಾ.ಪಂ ಅಧ್ಯಕ್ಷರು, ಸದಸ್ಯರು, ಪಿಡಿಒ ಹಾಗೂ ಗ್ರಾಪಂ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ಹಾಗೂ ಎಸ್‌ಬಿಎಂ-ಜಿ ಸಲಹೆಗಾರರು ಮತ್ತು ಪಂಚಾಯತ್ ಸಿಬ್ಬಂದಿ ಪ್ರತಿ ಮನೆ ಮನೆಗೆ ಭೇಟಿ ಮಾಡಿ ಕರಪತ್ರ ನೀಡುವ ಮೂಲಕ ಮತ್ತು ಆಟೋ ಪ್ರಚಾರದ ಮೂಲಕ ಮಲ ತ್ಯಾಜ್ಯ ನಿರ್ವಹಣಾ ಘಟಕದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿದ್ದಾರೆ.




**ಒಟ್ಟಾರೆ ರಾಜನಕುಂಟೆ FSM ಘಟಕದ ನಿರ್ಮಾಣದಿಂದ ಆ ಭಾಗದ ಗ್ರಾಮಗಳಲ್ಲಿ ನೈರ್ಮಲ್ಯ ಸಾಧನೆ ಸಾಧ್ಯವಾಗಿದ್ದು, ಜನರ ಆರೋಗ್ಯವೂ ಸುಧಾರಿಸಿದೆ. ಘಟಕವು ತನ್ನ ಕಾರ್ಯವೈಖರಿ ಮೂಲಕ ರಾಜ್ಯಕ್ಕೆ ಮಾದರಿಯಾಗಿದ್ದು, ಸ್ವಚ್ಛ ಭಾರತದ ಕನಸಿಗೆ ದಿಟ್ಟ ಹೆಜ್ಜೆಯಾಗಿ ರೂಪುಗೊಂಡಿದೆ.**